RegaNo BG 155

Sri "SATYAVADI"
— DAILY —
MYSORE 4
46 th Year

Protect the cow

— ೬೯ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

2—2—1962

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಮೈಸೂರು ಜಿಲ್ಲೆಯಲ್ಲಿ 8 ಲಕ್ಷ ಓಟುದುಗಳು

25 ನೆಯ ತಾ|| ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಮತ ದಾನ ಮಾಡಲು ಇಡೀ ಮೈಸೂರು ಜಿಲ್ಲೆಯಲ್ಲಿ 974 ಮತದಾನ ಕೇಂದ್ರಗಳಿವೆ ಓಟು ಸಂಖ್ಯೆ 866411

ಆಪಾಯವಿಲ್ಲ

ಅಪ್ಪಗ್ರಹ ಸಂಯೋಗದಿಂದ ಒಳ್ಳೆಯದಾಗುವುದೆಂದು ಹಾಂಗಕಾಂಗಿನ ಬೌದ್ಧರು ತಿಳಿಸಿದ್ದಾರೆ.

ಂ ಂ

ಕಾಶ್ಮೀರ ಚರ್ಚೆ ಬಗ್ಗೆ ಭಾರತದ ಸಂಗಡ ಸಲಹೆ ಪಡೆದಿಲ್ಲವೆಂದು ವಿಶ್ವಸಂಸ್ಥೆಯಲ್ಲಿ ಭಾರತ ಸೂಚಿಸಿತು

ಂ ಂ

ಮುಂಬರುವ ಚುನಾವಣೆಯಲ್ಲಿ ಪ ಮುಖ ರಾಜಕೀಯ ಪಕ್ಷಗಳಿಗೆ ಚುನಾವಣೆ ಪ ಚಾರ ಸೌಲಭ್ಯವನ್ನು ರೇಡಿಯೋ ವಾಲಾಳ ಒದಗಿಸುವ ಅಂಶವನ್ನು ಚು ನಾವಣಾ ಸಮಿತಿ ಕೈಬಿಟ್ಟಿದೆಯೆಂದು ದೆಹಲಿಯಿಂದ ವಾರ್ತೆ ಬಂದಿದೆ

ಂ ಂ

ಗ್ರಾಮಾಧಿಕಾರಿಗಳನ್ನು ರದ್ದು ಮಾಡಿರುವ ಬಗ್ಗೆ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಬೇಕೆಂದು ವಿದ್ಯಾರ್ಥಿನಲ್ಲಿ ಸೇರಿದ್ದ ಗ್ರಾಮಾಧಿಕಾರಿಗಳ ಸಮ್ಮೇಳನ ನಿರ್ಧರಿಸಿದೆ

ಲಾಠಿ ಪ್ರಹಾರ

ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ನೀತಿ ಪ್ರತಿಭಟಿಸಿ ಉಸ್ಮಾನಿಯಾ ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರವನ್ನು ಹೂಡಿ, ತಮ್ಮ ಸಹಾನುಭೂತಿಗಾಗಿ ವಿದ್ಯಾರ್ಥಿಗಳನ್ನು ಹೊಂಬಿಡುವಂತೆ ಕರ್ನೂಲು ಪೌಂಸಭೆ ಹೈಸ್ಕೂಲು ಮುಖ್ಯ ಉಪಾಧ್ಯಾಯರನ್ನು ಕೇಳಿದ ಸಂದರ್ಭದಲ್ಲಿ ಗೊಂದಲವಾಗಿ ಪೋಲೀಸರು ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ ಹಾಗೂ ಅಶ್ರುವಾಯು ಪ್ರಯೋಗವನ್ನು ಮಾಡಿದರು 12 ಮಂದಿ ಗಾಯಗೊಂಡರು.

ಶ್ರೀಮತಿ ಕೆನೆಡಿ

ಮಾರ್ಚಿ 3 ನೇ ತಾ|| ಅಥವಾ ಅದರ ಸುಮಾರಿಗೆ ಭಾರತಕ್ಕೆ ಆಗಮಿಸುವ ಅಮೆರಿಕಾ ಅಧ್ಯಕ್ಷರ ಪತ್ನಿ ಶ್ರೀಮತಿ ಕೆನೆಡಿಯವರು ಇಲ್ಲಿ ಹದಿನೇಳು ದಿವಸಗಳ ಪರಿಗೆ ಪ್ರವಾಸ ಮಾಡುವರು. ದೆಹಲಿ ಯಲ್ಲಿ ನಾಲ್ಕು ದಿವಸಗಳು ಇರುವರು

ಪ್ರಾಂತ ಸಮಿತಿಗಳಿಗೆ ಅಧಿಕಾರ

ಪಕ್ಷದ ಅನುಮೋದನೆ ಇಲ್ಲದೆ ಚುನಾವಣಾ ನಾಮಪತ್ರಗಳನ್ನು ಸಲ್ಲಿಸಿರುವ ಕಾಂಗ್ರೆಸಿಗರ ಮೇಲೆ ಬೇಗನೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲು ಪ್ರಾಂತ್ಯ ಕಾಂಗ್ರೆಸು ಸಮಿತಿಗಳಿಗೆ ಭಾರತ ಕಾಂಗ್ರೆಸು ಅಧಿಕಾರ ಇತ್ತಿದೆ ಎಂದು ನವ ದೆಹಲಿ ವಾರ್ತೆ ತಿಳಿಸುತ್ತದೆ.

ಕಟ್ಟಡದ ಬಾಡಿಗೆ

ಲಂಡನ್ನಿನ ನ್ಯೂ ಬಾಂಡು ಸ್ಟ್ರೀಟಿನಲ್ಲಿರುವ 21 ನೆಯ ನಂಬರು ಗ್ರೌಂಡು ಫ್ಲೋರು ಹಾಗೂ ಬೇಸ್ಮೆಂಟನ್ನು ಭಾರತ ಸರ್ಕಾರಿಂದ ಪ್ರವಾಸಿ ಕಚೇರಿ ವಾರ್ಷಿಕ ಬಾಡಿಗೆ 700 ಪೌಂಡುಗಳಿಗೆ ಪಡೆದಿದೆ.

ಂಂ

ಓಟುದಾರರಿಗೆ ಸಿಹಿ ಹಂಚುವದಕ್ಕೆ ಪ್ರದೇಶ ಕಾಂಗ್ರೆಸು ಸಮಿತಿ ಅರ್ಜರು ಕೊಟ್ಟಿಲ್ಲವೆಂದು ಕಾಂಗ್ರೆಸು ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಬೆಂಗಳೂರಿನಲ್ಲಿ ತಿಳಿಸಿರುವರು.

ವಿವಿಧ ವಿಷಯಗಳು

ಡಚ್ ನ್ಯೂಗಿನಿಗೆ ಸಂಬಂಧಿಸಿದಂತೆ ಆಸ್ಟ್ರೇಲಿಯಾ ನಿಲುವಿನಲ್ಲಿ ಯಾವ ಬದಲಾವಣೆಯೂ ಇಲ್ಲವೆಂದು ಆಸ್ಟ್ರೇಲಿಯಾ ವಿದೇಶ ಮಂತ್ರಿ ಸರ್ ಗಾರ್ಫೀಲ್ಡ್ ಬಾರ್'ಎಕ್ ಹೇಗ್'ನಲ್ಲಿ ತಿಳಿಸಿದ್ದಾರೆ

ಭಾರತಕ್ಕೆ ಆಗಮಿಸುವ ಜರ್ಮನ್ ಡೆಮೊಕ್ರಾಟಿಕ್ ಫ್ರೀ ಜರ್ಮನ್ ಯುವಕ ನಿಯೋಗ ಭಾರತದಲ್ಲಿ 7 ದಿವಸಗಳ ಪ್ರವಾಸ ಮಾಡುವದು

ನಿಕ್ ಜಸರ ಕುಂದುಕೊರತೆಗಳ ಪರಿಶೀಲನೆಗೆ ನೇಮಿಸಲಾಗಿದ್ದ ದಾಸ್ ಸಮಿತಿಯು ಭಾರತ ಸರ್ಕಾರಕ್ಕೆ ವರದಿ ಸಲ್ಲಿಸಿದೆ.

ವಿದ್ಯುತ್ ಸರಬರಾಜಿನ ಅಭಾವದ ಕಾರಣ ಆಂಧ್ರದಲ್ಲಿ ಶೇಕಡ 25 ರಷ್ಟು ವಿದ್ಯುತ್ ಕೊರತೆ ಆಗಿದೆ

ರಾಜ್ಯದ ಮೂರು ಆಯುರ್ವೇದಿಕ್ ಕಾಲೇಜುಗಳ ಜಿ ಸಿ ಎಂ ವಿದ್ಯಾರ್ಥಿಗಳು ಇಪ್ಪತ್ತು ದಿವಸಗಳಿಂದ ನಡೆಸಿಕೊಂಡು ಬಂದಿರುವ ಮುಷ್ಕರ ಸಂದರ್ಭದಲ್ಲಿ ನಿನ್ನೆ ಎಲ್ಲ ವಿದ್ಯಾರ್ಥಿಗಳು ತಾಳ್ಮೆ ಗೆಡದೆ ತಮ್ಮ ಧ್ಯೇಯದಲ್ಲಿ ಭರವಸೆಯನ್ನಿಟ್ಟು ಮಾನ್ಯ ಸರ್ಕಾರವು ಅದಷ್ಟು ಬೇಗನೆ ನ್ಯಾಯ ವೆನ್ನು ನೀಡಲೆಂದು ದೇವರನ್ನು ಪ್ರಾರ್ಥಿಸಿದರು.

ಪಟ್ಟಣದ ಗೃಹಸಚಿವ ವ್ಯವಹಾರಗಳ ಮಂತ್ರಿಶಾಖೆಯು ಮಂತ್ರಿತ್ವವನ್ನು ಒಪ್ಪಿ ನೀಗ್ರೊಗಳಿಗೆ ಕೊಡಲು ಅಮೆರಿಕಾ ಅಧ್ಯಕ್ಷರಾದ ಕೆನೆಡಿಯವರು ಕಾಂಗ್ರೆಸಿಗೆ ಸಂದೇಶ ಕಳಿಸಿರುವರೆಂದು ವಾಷಿಂಗ್ಟನ್ನಿಂದ ವಾರ್ತೆ

ಸೂಚಿತವಾಗಿರುವ ಪಾಕಿಸ್ತಾನ ಭಾರತ ಒಪ್ಪಂದವು ಕೆಲವು ವಿಷಯಗಳನ್ನು ಉಲ್ಲಂಘಿಸಿದೆ ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಸುಹ್ರಾವರ್ದಿಯವರಿಗೆ ವಿರೋಧವಿತ್ತೆಂದೂ, ಆ ಕಾರಣ ಅವರು ಬಂಧನವಾಗಿದ್ದರೆಂದೂ ಕರಾಚಿ ವಾರ್ತೆ.

ಪಾಳೆಯ ಪಂಚಾಂಗ

ಅಸ್ಮಾನ ಮಹಾವಿದ್ವಾದರ್ಶಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯ ಶಾಸ್ತ್ರಿ ಜೋಯಿಸರಿಂದ
3 ತ್ರಯೋದಶಿ ಪೂರ್ವಾಷಾಢ

ರಷ್ಯ--ಚೀನದ ಕಾತುರ

ಅಧ್ಯಕ್ಷ ಕೆನೆಡಿ ಅಧಿಕಾರದಿಂದ ತೆರವಾದ ಕವ್ಯಾನಿಸ್ಟು ಪಕ್ಷದ ಪ್ರಧಾನ ಕಾರ್ಯದರ್ಶಿಯವರ ಆಯ್ಕೆ ಬಗ್ಗೆ, ಭಾರತ ಕಮ್ಯೂನಿಸ್ಟು ಪಕ್ಷದ ನಾಯಕ ಕತ್ವ ಕಲಹ ಹೇಗೆ ಪರ್ಯವಸಾನವಾಗುವದೆಂಬುದರ ಕುರಿತು ರಷ್ಯ ಮತ್ತು ನವ ಚೀನ ಅಸಕ್ತಿಯಿಂದ ನೋಡುತ್ತಿದೆ ಎಂದು ನವ ದೆಹಲಿ ವಾರ್ತೆ ತಿಳಿಸುತ್ತದೆ

ಅಧ್ಯಕ್ಷ ಕೆನೆಡಿ, ಕಾಂಗೋ ಪ್ರಧಾನಿ ಅಡೌಲಾರನ್ನು ಅಮೆರಿಕಾಕ್ಕೆ ಆಹ್ವಾನಿಸಿರುವರು ಅವರು ವಾರಾಂತ್ಯದಲ್ಲಿ ನ್ಯೂಯಾರ್ಕಿಗೆ ಆಗಮಿಸುವ ನಿರೀಕ್ಷೆ ಇದೆ. ಅವರು ವಿಶ್ವಸಂಸ್ಥೆಯ ವಿಶೇಷ ಸಭೆಯನ್ನುದ್ದೇಶಿಸಿ ಭಾಷಣ ಮಾಡಲು ಆಹ್ವಾನಿಸಲಾಗುವದು.

ನೆವಾಡ ಪ್ರದೇಶದಲ್ಲಿ ಭೂಮಿಯ ಕೆಳಗೆ ಅಮೆರಿಕ ಅಣು ಪ್ರಯೋಗವನ್ನು ನಡೆಸಿದೆ.

1922 ರಲ್ಲಿ ಅಹಮದಾಬಾದು ಸಬರಮತಿ ಜೇಲಿನಲ್ಲಿ ಗಾಂಧೀಜಿ ಇದ್ದ ಸಂಬಂಧದ ಖಾದಿ ವಸ್ತ್ರಪ್ರದರ್ಶನವನ್ನು ಗುಜರಾತು ಮುಖ್ಯ ಮಂತ್ರಿ ಡಾ|| ಜೀವರಾಜ ಮೆಹತ ಉದ್ಘಾಟಿಸಿದರು.

ಲಂಚಪಡೆಯೋಧ ಶಾಸನವನ್ನು ಬಿಗಿ ಗೊಳಿಸಲು ಕೇರಳ ಸರ್ಕಾರ ನಿರ್ಧರಿಸಿದೆ ಈ ಸಂಬಂಧದ ಶಾಸನ ಸೂಚಿತವಾಗಿದೆ

ಅಂಗೋಲಾದಲ್ಲಿ ದಬ್ಬಾಳಿಕೆ ನಿಲ್ಲಿಸುವಂತೆ ವಿಶ್ವಸಂಸ್ಥೆ ಪೋರ್ಚುಗಲ್'ಗೆ ತಿಳಿಸಿದೆ.

ಭಾರತದ ಸಕ್ಕರೆ ಕೈಗಾರಿಕೆ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದೆ ಎಂದು ದೆಹಲಿಯಿಂದ ವರದಿ ಬಂದಿದೆ ವೇತನ ಸಮಿತಿಯ ಶಿಫಾರಸುಗಳು ಜಾರಿಗೆ ಬಂದನಂತರ ಸಕ್ಕರೆ ಉತ್ಪಾದನೆ ವೆಚ್ಚ ಹೆಚ್ಚಿದೆ ಎಂದು ವರದಿಯಾಗಿದೆ

ನೇವಾಲ್ ಡೊರೆ ಪಕ್ಷೇಂದ್ರರು ಅಡಳಿತ ವಿರುದ್ಧ ಪಶ್ಚಿಮ ನೇವಾಲದಲ್ಲಿ ಬಲವಾದ ಕ್ರಾಂತಿ ನಡೆದಿದೆ ಎಂದು ಕಲ್ಯ ಕ್ತಾ ವಾರ್ತೆ ತಿಳಿಸುತ್ತದೆ.

ಜನವರಿಯ ಜೀನುಹನಿಗಳು

★

ಸತ್ಯವೆಲ್ಲಿ

ಮುಖಂಡರೆನಿಸುವವರೆಲ್ಲರು ಹೇಳುವ
ಮಾತನು ಕೇಳುತ ನಿತ್ಯ |
ಅಖಂಡ ರಾಜಕೀಯದಿ ಮುಳುಗಿ |
ನೋಡಲು, ದೂಂದಿ ಇದೆ, ಸತ್ಯ ||

ಸರಕಾರಿ ಔಷಧ

ಶಲೆ ಶೂಲೆ, ಎದೆ ನೋವು, ಹೊಟ್ಟೆಯುರಿ|
ಎಲ್ಲದಕು ಮದ್ದೊಂದೇ ಕೆಂಪು ನೀರು |
ದೂಂಬಲಾಸ್ಪತ್ರೆಗಳ ಒಳಗು ಹೊರಗೂ
ಇಂಪು |
ರೋಗಿಗಳಿಗಿದುವೆ ಶಂಪು ಖೀರು ||

ಎಡೂ ಬೇಕು

ಶಾಂತಿಗಾಗಿ ಸದ್ದು ಬೇಕು |
ಎನುವ ಮಂದಿಯಿಹರು |
ಸ ವಿ ಶಾ ತಿ ಬಂದು |
ಎನುವವರೂ ಇಹರು ||

ಹಳೆಯ ಹೊಸ - ಸಿದ್ಧಾಂತ

ಉಳುವವನೆ ಹೊಲದೊಡೆಯ |
ಇದು ಸೋಷಿಯಲ್ ಸಿದ್ಧಾಂತ |
ಬಾಳುವವನೇ ಅಂಪ |
ಇದ ಹಳೆಯ ರಾದ್ಧಾಂತ ||

ಹೊಸ ರೂಢಿ

ಬದುಕಿರಲು ಕಡೆಗಣಿಸಿದವನನೂ |
ಸತ್ತ ಮೇಲೆ ಹೊಗಳುವುದು ರೂಢಿ |
ಅನ್ಯಥಲೋ ? ಸತ್ತ ನಾಲಿನನಸ್ಥಿ ಪಂಜ
ರಕು |
ಹಾಕುತಿಹರೀಗ ಛೀಗಳೆದು ಬೇಡಿ |

ಬುದ್ಧಿಯ ಬಲ

ರಾವಣಗೆ ತಲೆ ಹತ್ತು |
ಕೈಗಳೋ ಇಪ್ಪತ್ತು |
ಕಾರ್ತವೀರ್ಯಾರ್ಜುನಗೆ |
ತಲೆಯೊಂದೇ ಕೈ ಮಾತ್ರ ನಾವಿರ ||
ಆದರೇ ಕಲಿಯುಗದಿ ಎಲ್ಲರಿಗು |
ಒಂದೇ ತಲೆ, ಎರಡು ಕೈಗಳು |
ಇದ್ದರೇನಾಯ್ತು ?
ಬುದ್ಧಿಯೋ ಸೂರಕಾರು, ಅಲ್ಲ-ಹುಲವಾರು |

ಬಂದಿತ್ತು ಮೂರ್ಖ

ಅಲ್ಲಿ- ಯು ಎಸ್. ಓ ದಲ್ಲಿ
ಪ್ರಪಂಚ ರಾಷ್ಟ್ರಗಳೆಲ್ಲ ಒಂದಾಗಿ
ಲೋಕಶಾಂತಿಯು ಕುರಿತು ನಡೆಸುವರು
ಚರ್ಚೆ |

ಇತ್ತಿ- ವಿಜ್ಞಾನಿಗಳು ಸೃಷ್ಟಿಸುವ
ಮಾರಕಾಸ್ತ್ರಗಳ ನೋಡಿ ನೋಡಿ
ಶಾಂತಿದೇವತೆಗದೋ ಒಂದಿಕ್ಕ ಮೂರ್ಛೆ |

ವಿಧಿಯ ಮಾಟ

ಆಫೀಸಿನಲ್ಲಿ ಮೆನೆಜರರ ಕಿಡಿ ನೋಟ |
ಮನೆಯಲ್ಲಿ ಮಡದಿಯಾ ವಕ್ಕಳಾ ಕಾಟ
ಹಾದಿಯಲಿ, ಬೀದಿಯಲಿ, ಸಾಲಗಾರರ
ಕಾಟ
ಒಡ ಮಾಸ್ತರನ ಬಾಳು ಇದು, ವಿಧಿಯ
ಮಾಟ |

ಅಲ್ಲ

ಜೈಲು ಸೇರಿ ಬಂದವರೆಲ್ಲ
ದೇಶಭಕ್ತರಲ್ಲ,
ಕಾಲೇಜು ಹೊಕ್ಕು ಹೊಂಟವರೆಲ್ಲ
ಬುದ್ಧಿವಂತರಲ್ಲ.

ಸ್ವಾತಂತ್ರ್ಯ

ಅಕ್ಕಸಾಲಿಗ ಮಾತ್ರ ಕಿವಿ ಚುಚ್ಚಬೇಕಂತೆ
ಅತ್ತೆ, ಮಾತ್ತವೆ ಸೊಸೆಯು ಬಯ್ಯುತಿರ
ಬೇಕಂತೆ
ಮತ್ತೆ ಉಳಿದೆಲ್ಲ ವರ್ಗಕು- ಅವಂವರ
ಸ್ವಾತಂತ್ರ್ಯ ಬೇಕಂತೆ

ಸಾಹಿತಿ ?

ನೀನೆಷ್ಟೂ ಬರೆದರೂ ಈಗ ಸಾಹಿತಿಯಲ್ಲ
ಸತ್ತಾಗ ಮಾತ್ರ ಕಣ್ಣೀರು ಸುರಿಸುತ್ತ
ಸ್ಮಾರಕವ ರಚಿಸುವರಲ್ಲ !- ಸತ್ಯ ಇದು,
ಸುಳ್ಳಲ್ಲ !

[ಮಂ. ಪ್ರ.] — ವಿಚಿತ್ರ

ITEOL-3
THE IDEAL ANTISEPTIC

Non-poisonous, non-corrosive and pleasant smelling. Available in 4 oz and 16 oz bottles and 1 gallon tins.

TRADE MARK

THE MYSORE INDUSTRIAL & TESTING LABORATORY LTD., BANGALORE-3,
Madras Sales Office:- 33/57, THAMBU CHETTY STREET, MADRAS-1.

Our Bangalore Sales Depot address—
71/4 Arcot Sreenivasachar St., Bangalore 2.

ಪುಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ಷಮಾ (ಹಿಂದಿ) SHAMA

ಪಾತ್ರ-ಸುರಯ್ಯ, ನಿಮ್ಮಿ, ವಿಜೆ ದತ್ ; ಸಂಗೀತ : ಗುಲಾಂ ಮಹಮದ್
ಅಮೋಘ ಹಿಂದಿ ಕಲಾಕೃತಿ [ದಿನವಹಿ 3 ಪ್ರದರ್ಶನಗಳು]

ಆಪೆರಾ ಇಂದ 2-2-62 ರಿಂದ

ಭೂಕೈಲಾಸ (ಕನ್ನಡ)

ತಾರಾಗಣ— ರಾಜಕುಮಾರ್, ಜಮುನ, ಇ ವಿ ಸರೋಜ, ರಂಗರಾವ್
ಕಮಲಾ ಲಕ್ಷ್ಮಣ್, ಗೋಪಿ ಕೃಷ್ಣ [ದಿನವಹಿ 3 ಆಟಗಳು]

SHAKTI SUDHA

A Superb Tonic

— Advertise in —
Sri 'SATYAVADI' Daily

Oldest Newspaper in the State ; Splendid Advertiser

Edited, Printed & Published by the Proprietor, Dharma Prichara Nirata M. S. Krishna Rao at the Satyavadi Press, Chamarajapuram, Mysore 4.

Help 'The Gorakshana'

ಗೋರಕ್ಷಣಾ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ
" ಗೋರಕ್ಷಣಾ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುಪೈದ್ಯ, ಕೃಷಿಕಾರ್ಯ ವಿಚಾರಗಳ ಪ್ರಚಾರದ
ದಿಕ್ಕಿಗೆ ಕನ್ನಡ ಪತ್ರಿಕೆ.

ಗೋರಕ್ಷಣಾ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಸ್ವಚಿತ್ರ ಅನುಕೂಲವಾದ
ಲೇಖನಗಳನ್ನೂ ವಾರ್ಷಿಕಗಳನ್ನೂ ಪಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು